*(2 ನೇ ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆಕೆಯನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 19-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ **1** ನೇ ಆರೋಪಿಯ ಪರವಾಗಿ ಶ್ರೀ ಹೆಚ್.ಸಿ.ಎನ್. ವಕೀಲರಿಂದಃ –</u>

7. 2019-2020 ನೇ ಇಸವಿಯಿಂದ ನಾನು ಚಿಕ್ಕಮಗಳೂರಿನಲ್ಲಿರುವ ಬಿ.ಸಿ.ಎಂ. ಹಾಸ್ಟೇಲಿನಲ್ಲಿ ಇದ್ದೆನು. ನಿಮ್ಮ

ತಾಯಿ ಮತ್ತು ಅಜ್ಜಿಯ ನಡುವೆ ಆಗಾಗ್ಗೆ ಜಗಳವಾಗುತ್ತಿತ್ತು ಮತ್ತು ಅವರಿಬ್ಬರ ನಡುವೆ ಮಾತುಕತೆ ಇರಲಿಲ್ಲ ಎಂದರೆ ಸರಿ. ಆ ಕಾರಣಕ್ಕೆ ನಿಮ್ಮ ಅಜ್ಜಿ ನಿಮ್ಮ ಮನೆಯನ್ನು ಬಿಟ್ಟು ಬೇರೆ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

8. ನಿಮ್ಮ ತಂಗಿ ಪೂರ್ಣಿಮಳಿಗೆ ನಿಮ್ಮ ಗ್ರಾಮದಲ್ಲಿ ಸ್ನೇಹಿತರು ಇದ್ದರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅವರ ಹೆಸರುಗಳನ್ನು ಹೇಳಬಹುದೇ ಎಂದರೆ ಸಾಕ್ಷಿ ಪುಷ್ಪಾ, ಶ್ವೇತಾ, ಭೂಮಿಕ ಮತ್ತು ಇನ್ನೂ ಹಲವರು ಇದ್ದರು ಎನ್ನುತ್ತಾರೆ.  ನಿಮ್ಮ ತಂಗಿಗೆ ಯಾರು ಹೆಚ್ಚು ಆತ್ಮೀಯರು ಇದ್ದರು ಎಂದರೆ ಸಾಕ್ಷಿ ಪುಷ್ಪ ಎನ್ನುತ್ತಾರೆ. ನಮ್ಮ ಮನೆಯಿಂದ 10 ಮನೆಗಳ ನಂತರ ಸದರಿ ಪುಷ್ಪರವರ ಮನೆ ಇತ್ತು. ಪೂರ್ಣಿಮ ಶಾಲೆಗೆ ಹೋಗುವ ಸಮಯದಲ್ಲಿ ಪುಷ್ಪ ಮತ್ತು ಇತರೆ ಸ್ನೇಹಿತರೊಂದಿಗೆ ಹೋಗುತ್ತಿದ್ದಳು ಎಂದರೆ ಸರಿ.

9. 1 ನೇ ಆರೋಪಿ ನಿಮ್ಮ ಮನೆಗೆ ಬಂದು ಹೋಗುವುದನ್ನು ಮಾಡುತ್ತಿರಲಿಲ್ಲ ಎಂದರೆ ಸರಿ. ನಿಮ್ಮ ತಂದೆಗೆ ಮದ್ಯವನ್ನು ಸೇವಿಸುವ ಅಭ್ಯಾಸ ಇದೆ ಎಂದರೆ ಸರಿ. ಪ್ರಾಸಾ.5, 6 ಮತ್ತು ಚಾಸಾ.14 ರವರು ನಿಮ್ಮ ತಂದೆಯ ಸ್ನೇಹಿತರು ಎಂದರೆ ಸರಿ. ನೀವು ಹಾಸ್ಟೇಲಿನಲ್ಲಿದ್ದ ಕಾರಣ ಹೆಚ್ಚಾಗಿ ಊರಿಗೆ ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿದು ನಂತರ ವಾರಕ್ಕೊಮ್ಮೆ ರಜೆ ಸಿಕ್ಕಾಗ ಹೋಗುತ್ತಿದ್ದೆನು ಎನ್ನುತ್ತಾರೆ. ಆ ರೀತಿ ನೀವು ಊರಿಗೆ ಹೋದಾಗಲೆಲ್ಲಾ ನಿಮ್ಮ ಅಜ್ಜಿ ಎಂದರೆ ನಿಮ್ಮ ತಂದೆಯ ತಾಯಿಯ ಮನೆಗೆ ಹೋಗುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅದೇ ರೀತಿ ನೀವು ಊರಿಗೆ ಹೋದಾಗ ಪೂರ್ಣಿಮಳ ಸ್ನೇಹಿತರಾದ ಪುಷ್ಪ

ಮತ್ತು ಇತರರೊಂದಿಗೆ ಮಾತನಾಡುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅವರು ನಿಮ್ಮ ಮನೆಗೆ ಬರುತ್ತಿದ್ದರು ಮತ್ತು ನೀವುಗಳು ಸಹ ಅವರ ಮನೆಗೆ ಹೋಗುತ್ತಿದ್ದಿರಿ ಎಂದರೆ ಸರಿ.

10. ನಿಪಿ.1 ದೂರನ್ನು ನಾನು ಬರೆದಿದ್ದೇನೆ. ನನ್ನ ತಾಯಿ ನನಗೆ ತಿಳಿಸಿದ್ದ ವಿಚಾರಗಳನ್ನು ಸದರಿ ದೂರಿನಲ್ಲಿ ಬರೆದಿದ್ದೇನೆ. ಅದನ್ನು ನಾನು ನಮ್ಮ ಮನೆಯಲ್ಲೇ ಬರೆದಿದ್ದೇನೆ. ಸದರಿ ಬರವಣಿಗೆಯನ್ನು ಮಾಡುವ ಸಮಯದಲ್ಲಿ ಪ್ರಾಸಾ.5, 6 ಮತ್ತು ಚಾಸಾ.14 ರವರು ಇದ್ದರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಮ್ಮ ತಂದೆ, ಪ್ರಾಸಾ.5, 6 ಮತ್ತು ಚಾಸಾ.14 ರವರು ಸೇರಿ 1 ನೇ ಆರೋಪಿಯನ್ನು ಕೊಲೆ ಕೇಸಿನಲ್ಲಿ ಸಿಲುಕಿಸಲು ಸಂಚು ರೂಪಿಸಿದ್ದರು ಎಂದರೆ ಸರಿಯಲ್ಲ.

11. ನನ್ನ ತಂಗಿ ಮೃತಪಟ್ಟಿದ್ದ ದಿನ ನನ್ನ ತಂದೆ ಜಾವಗಲ್ ಸಂತೆಗೆ ಹೋಗಿದ್ದರು ಆದರೆ ಕೂಲಿ ಕೆಲಸಕ್ಕೆ ಹೋಗಿರಲಿಲ್ಲ. ನಿಪಿ.1 ದೂರಿನಲ್ಲಿ 'ವ್ಯಾಪಾರಕ್ಕೆ ಹೋಗಿದ್ದೆ' ಎಂದು ಬರೆದಿರುವುದನ್ನು ಒಡೆದು 'ಕೂಲಿ ಕೆಲಸಕ್ಕೆ  ಹೋಗಿದ್ದೆ' ಎಂದು ಬರೆಯಲಾಗಿದೆ ಎಂದರೆ ಸರಿ. ಅದನ್ನು ನೀವು ಒಡೆದು ಹಾಕಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೂರ್ಣಿಮ ಮೃತಪಟ್ಟಿದ್ದ ವಿಚಾರವನ್ನು ನನ್ನ ಅತ್ತೆ ಅಂದರೆ ನನ್ನ ತಾಯಿಯ ಅಮ್ಮನ ತಂಗಿಯ ಸೊಸೆಯಾದ ಲಾವಣ್ಯರವರು ತಿಳಿಸಿದ್ದಾರೆ ಎನ್ನುತ್ತಾರೆ. ಆ ಸಮಯದಲ್ಲಿ ನಾನು ಹಾಸ್ಟೇಲಿನಲ್ಲಿದ್ದೆನು, ಆಗ ಸಮಯ ಮಧ್ಯಾಹ್ಣ 12 ಗಂಟೆಯಾಗಿತ್ತು. ನೀವು ಎಸ್.ಬಿದರೆಗೆ ಬಂದಾಗ ಎಷ್ಟು ಸಮಯವಾಗಿತ್ತು ಎಂದು ನನಗೆ ನೆನಪಿಲ್ಲ.

12. ನೀವು ಮತ್ತು ನಿಮ್ಮ ತಂಗಿ ಪೂರ್ಣಿಮ ಚೆನ್ನಾಗಿದ್ದಿರಿ ಮತ್ತು ಆತ್ಮೀಯರಾಗಿದ್ದಿರಿ ಎಂದರೆ ಸರಿ. ನಿಮ್ಮ ತಂಗಿ ಎಲ್ಲಾ ವಿಚಾರಗಳನ್ನು ನಿಮ್ಮ ಜೊತೆ ಹಂಚಿಕೊಳ್ಳುತ್ತಿದ್ದಳು ಎಂದರೆ ಸರಿ. ನೀವು ವಾರಕ್ಕೊಮ್ಮೆ ಊರಿಗೆ ಹೋಗುತ್ತಿದ್ದೆ ಎಂದು ಹೇಳಿದ್ದೀರಿ ಆಗ ನೀವು ನಿಮ್ಮ ತಂಗಿ ಮತ್ತು ಆಕೆಯ ಸ್ನೇಹಿತರೊಂದಿಗೆ ಮಾತನಾಡುತ್ತಿದ್ದಿರಿ ಮತ್ತು ಕಷ್ಟಸುಖಗಳನ್ನು ಹಂಚಿಕೊಳ್ಳುತ್ತಿದ್ದಿರಿ ಎಂದರೆ ಸರಿ. ನೀವು 1 ನೇ ಆರೋಪಿಯೊಂದಿಗೆ ಎಂದಿಗೂ ಮಾತನಾಡುತ್ತಿರಲಿಲ್ಲ ಎಂದರೆ ಸರಿ. 1 ನೇ ಆರೋಪಿಗೆ ಮದುವೆಯಾಗಿ ಮಕ್ಕಳಿದ್ದಾರೆ ಆತ ಅವರೊಂದಿಗೆ ವಾಸವಾಗಿದ್ದಾನೆ ಎಂದರೆ ಸರಿ. 1 ನೇ ಆರೋಪಿಯ ಹೆಂಡತಿ, ಮಕ್ಕಳೊಂದಿಗೆ ನೀವು ಮಾತನಾಡುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ಊರಿನಲ್ಲಿ 500 ರಿಂದ 1000 ಮನೆಗಳು ಇವೆಯೇ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ.

13. ಕೌಟುಂಬಿಕ ವಿಷಯದಲ್ಲಿ ನಿಮ್ಮ ತಾಯಿ ಮತ್ತು ತಂದೆಯ ನಡುವೆ ಜಗಳವಾಗುತ್ತಿತ್ತು ಎಂದರೆ ಸರಿ. ಆ ಬಗ್ಗೆ ಯಾರಿಗಾದರೂ ದೂರನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನನ್ನ ತಾಯಿ ಮತ್ತು 1 ನೇ ಆರೋಪಿಯ ನಡುವಿನ ಸಂಬಂಧ ತಿಳಿದು ಬಂದ ಮೇಲೆ ಆ ಬಗ್ಗೆ ನನ್ನ ತಂದೆ ಸಖರಾಯಪಟ್ಟಣ ಪೊಲೀಸರಿಗೆ ದೂರನ್ನು ಕೊಟ್ಟಿದ್ದರು ಎನ್ನುತ್ತಾರೆ. ಸದರಿ ದೂರನ್ನು ಯಾವಾಗ ಕೊಡಲಾಗಿತ್ತು ಎಂದರೆ ಸಾಕ್ಷಿ ನನ್ನ ತಂಗಿ ಮೃತಪಡುವ ಒಂದರಿಂದ ಎರಡು ವರ್ಷಗಳ ಹಿಂದೆ ಎನ್ನುತ್ತಾರೆ. ಸದರಿ ದೂರಿನ ಮೇರೆಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿ ಪೊಲೀಸರು ನನ್ನ ತಾಯಿ, ತಂದೆ ಮತ್ತು 1 ನೇ

ಆರೋಪಿಯನ್ನು ಕರೆದು ವಿಚಾರಿಸಿದ್ದರು ಆಗ ನನ್ನ ತಾಯಿ ಮತ್ತು 1 ನೇ ಆರೋಪಿ ತಮ್ಮ ಸಂಬಂಧವನ್ನು ಮುಂದುವರೆಸುವುದಿಲ್ಲ ಎಂದು ಹೇಳಿದ್ದರಿಂದ ಕೇಸನ್ನು ಕ್ಲೋಸ್ ಮಾಡಿದ್ದರು ಎನ್ನುತ್ತಾರೆ. ಆಗ ನೀವು ಅಲ್ಲಿ ಹಾಜರು ಇದ್ದೀರಾ ಎಂದರೆ ಸಾಕ್ಷಿ ನಾನು ಹಾಜರಿರಲಿಲ್ಲ ನನ್ನ ತಂದೆ ಆ ಬಗ್ಗೆ ತಿಳಿಸಿದ್ದರು ಎನ್ನುತ್ತಾರೆ. ಆ ಬಗ್ಗೆ ಯಾರೆಲ್ಲಾ ಪಂಚಾಯ್ತಿಗೆಂದು ಠಾಣೆಗೆ ಹೋಗಿದ್ದರು ಎಂದರೆ ಸಾಕ್ಷಿ ನನ್ನ ತಂದೆ, ನನ್ನ ದೊಡ್ಡಪ್ಪ ರಾಮಶೆಟ್ಟಿ ರವರು ಆರೋಪಿತರೊಂದಿಗೆ ಠಾಣೆಗೆ ಹೋಗಿದ್ದರು ಎನ್ನುತ್ತಾರೆ.

14. ಈ ಪ್ರಕರಣದಲ್ಲಿ ಪೊಲೀಸರು ನಿಮ್ಮನ್ನು ವಿಚಾರಿಸಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ನಿಮ್ಮನ್ನು ಪೊಲೀಸರು ವಿಚಾರಿಸಿದ್ದಾರೆ ಎಂದರೆ ಸಾಕ್ಷಿ ನನ್ನ ತಂಗಿ ಮೃತಪಟ್ಟಿದ್ದ ದಿನವೇ ಎನ್ನುತ್ತಾರೆ. ಆ ಸಮಯದಲ್ಲಿ ನಿಮ್ಮೊಂದಿಗೆ ಯಾರಿದ್ದರು ಎಂದರೆ ಸಾಕ್ಷಿ ನನ್ನ ತಂದೆಯ ಸ್ನೇಹಿತರು ಮತ್ತು ಸಂಬಂಧಿಕರು ಇದ್ದರು ಎನ್ನುತ್ತಾರೆ. ಆ ದಿನ ನೀವು ಮೇಲೆ ಹೇಳಿದಂತೆ 1 ನೇ ಆರೋಪಿ ಮತ್ತು ನಿಮ್ಮ ತಾಯಿಯಾದ 2 ನೇ ಆರೋಪಿ ತಮ್ಮ ಸಂಬಂಧವನ್ನು ಮುಂದುವರೆಸುವುದಿಲ್ಲ ಎಂದು ಪೊಲೀಸರಿಗೆ ಹೇಳಿದ್ದ ಬಗ್ಗೆ ನೀವು ಪೊಲೀಸರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಆ ದಿನ ನಡೆದ ವಿಚಾರವನ್ನಷ್ಟೆ ಪೊಲೀಸರಿಗೆ ಹೇಳಿದ್ದೇನೆ ಮೇಲೆ ನೀವು ಕೇಳಿದ ವಿಚಾರವನ್ನು ತಿಳಿಸಿರಲಿಲ್ಲ ಆದರೆ ನನ್ನ ತಂಗಿಯ ಮರಣೋತ್ತರ ಪರೀಕ್ಷೆ ನಡೆದ ಬಳಿಕ ಪೊಲೀಸರಿಗೆ ಆ ಬಗ್ಗೆ ತಿಳಿಸಿದ್ದೇನೆ ಎನ್ನುತ್ತಾರೆ.

15. 1 ನೇ ಆರೋಪಿ 2 ನೇ ಆರೋಪಿಯ ಜೊತೆ ಏಕಾಂತದಲ್ಲಿ

ಇದ್ದಿದ್ದನ್ನು ನೀವು ಖುದ್ದಾಗಿ ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 1 ಮತ್ತು 2 ನೇ ಆರೋಪಿತರು ಏಕಾಂತದಲ್ಲಿದ್ದ ವಿಚಾರವನ್ನು ನಿಮ್ಮ ತಂಗಿ ನಿಮಗೆ ತಿಳಿಸಿರಲಿಲ್ಲ ಎಂದರೆ ಸಾಕ್ಷಿ ತಿಳಿಸಿದ್ದಳು ಎನ್ನುತ್ತಾರೆ. ನಿಮ್ಮ ತಂಗಿ ಮೃತಪಡುವ ಎಷ್ಟು ದಿನಗಳ ಹಿಂದೆ ಆಕೆ ಸದರಿ ವಿಚಾರವನ್ನು ನಿಮಗೆ ತಿಳಿಸಿದ್ದಳು ಎಂದರೆ ಸಾಕ್ಷಿ ಆಕೆ ಮೃತಪಡುವ 2 ವರ್ಷಗಳ ಹಿಂದಿನಿಂದಲೂ ಆಕೆ ಸದರಿ ವಿಚಾರವನ್ನು ನನಗೆ ಹೇಳುತ್ತಿದ್ದಳು ಎನ್ನುತ್ತಾರೆ. ಸದರಿ ವಿಚಾರವನ್ನು ನೀವು ಪೊಲೀಸರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ವಿಚಾರ ನಿಮ್ಮ ತಂಗಿಯ ಸ್ನೇಹಿತರಾದ ಪುಷ್ಪಾ ಮತ್ತು ಇತರರಿಗೆ ತಿಳಿದಿತ್ತೇ ಎಂದರೆ ಸಾಕ್ಷಿ ಅಷ್ಟಾಗಿ ತಿಳಿದಿರಲಿಲ್ಲ ಸ್ವಲ್ಪ ಮಟ್ಟಿಗೆ ತಿಳಿದಿತ್ತು ಎನ್ನುತ್ತಾರೆ. ಆರೋಪಿತರು ಏಕಾಂತದಲ್ಲಿದ್ದನ್ನು ನೀನು ನೋಡಿದ್ದೀಯಾ ಎಂದು ನೀವು ನಿಮ್ಮ ತಂಗಿಯನ್ನು ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿ ಹೌದು ಪ್ರಶ್ನಿಸಿದ್ದೇನೆ ಆಗ ಆಕೆ ಹೌದು ನಾನು ಅವರಿಬ್ಬರು ಏಕಾಂತದಲ್ಲಿ ಇರುವುದನ್ನು ನೋಡಿದ್ದೇನೆ ಎಂದು ನನಗೆ ಹೇಳಿದ್ದಳು ಎನ್ನುತ್ತಾರೆ. ಸದರಿ ವಿಚಾರವನ್ನು ಯಾವ ದಿನಾಂಕದಂದು ಮತ್ತು ಯಾರ ಸಮಕ್ಷಮದಲ್ಲಿ ನಿಮ್ಮ ತಂಗಿ ನಿಮಗೆ ತಿಳಿಸಿದ್ದಳು ಎಂದರೆ ಸಾಕ್ಷಿ ನನ್ನ ತಂಗಿ ನನ್ನ ಹಾಸ್ಟೇಲಿಗೆ ಕರೆ ಮಾಡಿದಾಗಲ್ಲೆಲ್ಲಾ ನನಗೆ ಆ ವಿಚಾರವನ್ನು ತಿಳಿಸುತ್ತಿದ್ದಳು ಮತ್ತು ಊರಿಗೆ ಹೋದಾಗ ನಾನು ಒಬ್ಬಳೇ ಸಿಕ್ಕಾಗ ಹೇಳುತ್ತಿದ್ದಳು ಎನ್ನುತ್ತಾರೆ. ಸದರಿ ವಿಚಾರವನ್ನು ನಿಮ್ಮ ತಂದೆ ನಿಮಗೆ ತಿಳಿಸಿರಲಿಲ್ಲವೇ ಎಂದರೆ ಸಾಕ್ಷಿ ತಿಳಿಸಿದ್ದರು ಎನ್ನುತ್ತಾರೆ. ಯಾವಾಗ ತಿಳಿಸಿದ್ದರು ಎಂದರೆ ಸಾಕ್ಷಿ ನಾನು ಹಾಸ್ಟೇಲಿಗೆ 2019 ನೇ

ಇಸವಿಯಲ್ಲಿ ಸೇರಿಕೊಂಡಿದಾಗಿನಿಂದಲೂ ತಿಳಿಸುತ್ತಿದ್ದರು ಎನ್ನುತ್ತಾರೆ. ವಿಷಯ ತಿಳಿದ ಬಳಿಕ ನೀವು ನಿಮ್ಮ ತಾಯಿಯನ್ನು ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿ ಪ್ರಶ್ನಿಸಿದ್ದೇನೆ ಎನ್ನುತ್ತಾರೆ. ನಿಮ್ಮ ತಂಗಿ ಹೇಳಿದ ವಿಚಾರ ನಿಜವೇ ಅಥವಾ ಸುಳ್ಳೇ ಎಂದು ತಿಳಿದುಕೊಳ್ಳಲು ನೀವು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಹೌದು ಆ ಬಗ್ಗೆ ನನ್ನ ತಂದೆ ಮತ್ತು ಅಜ್ಜಿಯನ್ನು ಕೇಳಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ಆ ಬಗ್ಗೆ ನೀವು ಪೊಲೀಸರಿಗೆ ದೂರು ಕೊಡಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ನಾನು ಕೊಟ್ಟಿಲ್ಲ ಎನ್ನುತ್ತಾರೆ.

16. ನನ್ನ ತಂಗಿ ಶಾಲೆಯಿಂದ ಮನೆಗೆ ಹೋಗುವಾಗ 1 ನೇ ಆರೋಪಿ ಆಕೆಗೆ ಹೆದರಿಸಿದ್ದನು. ಅದು ಯಾವ ದಿನಾಂಕ ಮತ್ತು ಸಮಯ ಎಂದರೆ ಸಾಕ್ಷಿ ದಿಃ 02-03-2021 ರಂದು ನನ್ನ ತಂಗಿ ಶಾಲೆಯಿಂದ ಮನೆಗೆ ವಾಪಸ್ ಬರುವಾಗ ಆದರೆ ಸಮಯ ಎಷ್ಟಾಗಿತ್ತು ಎಂದು ನಿಖರವಾಗಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಚಾರವನ್ನು ನೀವು ಪೊಲೀಸರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಬಗ್ಗೆ ನೀವು ನಿಮ್ಮ ತಂಗಿಯ ಸ್ನೇಹಿತರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

17. ಪೊಲೀಸರು ನಿಮ್ಮನ್ನು ಎಷ್ಟು ಬಾರಿ ವಿಚಾರಿಸಿದ್ದಾರೆ ಎಂದರೆ ಸಾಕ್ಷಿ ತುಂಬಾ ಸಲ ವಿಚಾರಿಸಿದ್ದಾರೆ ಎನ್ನುತ್ತಾರೆ. ನಿಮ್ಮನ್ನು, ನಿಮ್ಮ ತಂದೆ ಮತ್ತು ಅಜ್ಜಿಯನ್ನು ಒಟ್ಟಿಗೆ ಕೂರಿಸಿ ಪೊಲೀಸರು ವಿಚಾರಿಸಿದ್ದಾರೆಯೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಸಮಯದಲ್ಲಿ ಫ್ರಾಸಾ.5, 6 ಮತ್ತು ಚಾಸಾ.14 ರವರು ಇದ್ದರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಸಮಯದಲ್ಲಿ ನಿಮ್ಮ ತಂದೆ,

ಫ್ರಾಸಾ.5, 6 ಮತ್ತು ಚಾಸಾ.14 ರವರು ಸೇರಿ 1 ನೇ ಆರೋಪಿಯನ್ನು ಕೊಲೆ ಕೇಸಿನಲ್ಲಿ ಸಿಲುಕಿಸಿ ಎಂದು ಪೊಲೀಸರಿಗೆ ಒತ್ತಾಯ ಮಾಡಿದರು ಎಂದರೆ ಸರಿಯಲ್ಲ.

18. ನೀವು ನಿಮ್ಮ ತಂಗಿಯ ಶಾಲೆಯ ಶಿಕ್ಷಕರನ್ನು ಭೇಟಿ ಮಾಡಿ 1 ನೇ ಆರೋಪಿ ನಿಮ್ಮ ತಂಗಿಗೆ ದಾರಿಯಲ್ಲಿ ಬೆದರಿಸುವ ಬಗ್ಗೆ ವಿಚಾರಿಸಿ ದೂರನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ಸಂಬಂಧಿಕರಿಗೆ ಮತ್ತು ಗ್ರಾಮದವರಿಗೆ 1 ನೇ ಆರೋಪಿಯ ಬಗ್ಗೆ ಹೇಳಿದ್ದೀರಾ ಎಂದರೆ ಸಾಕ್ಷಿ ಗ್ರಾಮದವರಿಗೆ ಹೇಳಿಲ್ಲ ಆದರೆ ನನ್ನ ಚಿಕ್ಕಮ್ಮ ಮತ್ತು ದೊಡ್ಡಮ್ಮರಾದ ಅನಿತಾ, ಸುನಿತಾ, ಕಾಂತಮ್ಮ ಮತ್ತು ರೇಣುಕರವರನ್ನು ಮನೆಗೆ ಕರೆಸಿ ಅವರಿಗೆ ಮಾಹಿತಿಯನ್ನು ತಿಳಿಸಿ ಅವರಿಂದ ನಮ್ಮ ತಾಯಿಗೆ ಬುದ್ದಿ ಹೇಳಿಸಿದ್ದೆವು ಎನ್ನುತ್ತಾರೆ. ಆ ಬಗ್ಗೆ ನೀವು ಪೊಲೀಸರಿಗೆ ತಿಳಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅದನ್ನು ಪೊಲೀಸರಿಗೆ ಹೇಳಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸರಿ.

19. 1 ಮತ್ತು 2 ನೇ ಆರೋಪಿತರು ನಿಮ್ಮ ತಂಗಿಗೆ ಹಿಂಸೆಯನ್ನು ಕೊಡುತ್ತಿದ್ದರು ಎಂದು ಹೇಳಿದ್ದೀರಿ ಯಾವ ರೀತಿ ಹಿಂಸೆ ಕೊಡುತ್ತಿದ್ದರು ಎಂದರೆ ಸಾಕ್ಷಿ 1 ನೇ ಆರೋಪಿ ನನ್ನ ತಂಗಿ ಶಾಲೆಗೆ ಹೋಗಿ ಬರುವಾಗ ದಾರಿಯಲ್ಲಿ ಆಕೆಗೆ ತನ್ನ ಮತ್ತು 2 ನೇ ಆರೋಪಿಯ ಸಂಬಂಧದ ವಿಚಾರವನ್ನು ಯಾರಿಗೂ ತಿಳಿಸಬೇಡ ಎಂದು ಬೆದರಿಸಿದ್ದನು ಮತ್ತು ಮನೆಯಲ್ಲಿ ನನ್ನ ತಾಯಿ ಆ ವಿಚಾರವನ್ನು ಯಾರಿಗೂ ಹೇಳಬೇಡ ಎಂದು ನನ್ನ ತಂಗಿಗೆ ಹೊಡೆಯುವುದು, ಕೂಗಾಡುವುದನ್ನು ಮತ್ತು

ಕಿರುಚಾಡುವುದನ್ನು ಮಾಡುತ್ತಿದ್ದರು ಎನ್ನುತ್ತಾರೆ. ಆ ರೀತಿ ಯಾವ ದಿನಾಂಕದಂದು ಹೊಡೆದಿದ್ದಾಗಿ ನಿಮ್ಮ ತಂಗಿ ನಿಮಗೆ ತಿಳಿಸಿದ್ದಳು ಎಂದರೆ ಸಾಕ್ಷಿ ಆರೋಪಿತರ ಸಂಬಂಧ ಹೆಚ್ಚಾದಾಗ ಆ ವಿಚಾರವನ್ನು ನನಗೂ ಹೇಳಬೇಡ ಎಂದು ನನ್ನ ತಾಯಿ ನನ್ನ ತಂಗಿ ಹೊಡೆಯುತ್ತಿದ್ದಾಗಿ ನನ್ನ ತಂಗಿ ನನಗೆ ತಿಳಿಸಿದ್ದಳು ಎನ್ನುತ್ತಾರೆ. ಆ ಬಗ್ಗೆ ನಿಮ್ಮ ತಾಯಿ ನಿಮ್ಮ ತಂಗಿಗೆ ಆ ರೀತಿ ಹೊಡೆದಾಗ ಆಕೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದಾಳೆಯೇ ಎಂದರೆ ಸಾಕ್ಷಿ ಆಸ್ಪತ್ರೆಗೆ ಹೋಗುವಷ್ಟು ಹೊಡೆದಿರಲಿಲ್ಲ ಆದರೆ ಮೈಕೈ ನೋವಾಗುವಷ್ಟು ಹೊಡೆದಿದ್ದಳು ಎನ್ನುತ್ತಾರೆ. ಆ ಬಗ್ಗೆ ನೀವು ಪೊಲೀಸರಿಗೆ ಮಾಹಿತಿ ಕೊಟ್ಟು ದೂರು ಕೊಡಲು ಪ್ರಯತ್ನಿಸಿದ್ದಿರಾ ಎಂದರೆ ಸಾಕ್ಷಿ ದೊಡ್ಡವರಿದ್ದರು ನಾನು ಮಾಡಿಲ್ಲ ಎನ್ನುತ್ತಾರೆ.

20. ನೀವು 1 ನೇ ಆರೋಪಿಯನ್ನು ಯಾಕೆ ನನ್ನ ತಂಗಿಗೆ ಆ ರೀತಿ ಮಾಡುತ್ತಿದ್ದೀರಾ ಎಂದು ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ತಂಗಿಯ ಬಳಿ ಮೊಬೈಲ್ ಇತ್ತೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅದರ ನಂಬರು ಏನಾಗಿತ್ತು ಎಂದರೆ ಸಾಕ್ಷಿ 9380922038 ಎನ್ನುತ್ತಾರೆ. ಅದನ್ನು ಪೊಲೀಸರು ತೆಗೆದುಕೊಂಡರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

21. ನಿಮ್ಮ ತಂದೆ ಪ್ರತಿದಿನ ಕುಡಿದು ಬರುತ್ತಾರೆ ಎನ್ನುವ ವಿಚಾರಕ್ಕೆ ಆತ ಮತ್ತು ನಿಮ್ಮ ತಾಯಿಯ ನಡುವೆ ಜಗಳವಾಗುತ್ತಿತ್ತು ಎಂದರೆ ಸಾಕ್ಷಿ ಆ ಬಗ್ಗೆ ಮೊದಲಿನಿಂದಲೂ ಜಗಳವಾಗುತ್ತಿತ್ತು ಆದರೆ ಆಕೆ 1 ನೇ ಆರೋಪಿಯೊಂದಿಗೆ ಸಂಬಂಧ ಇಟ್ಟುಕೊಂಡ ಬಗ್ಗೆ ಸಹ ಜಗಳವಾಗುತ್ತಿತ್ತು ಎನ್ನುತ್ತಾರೆ. ನನ್ನ ತಂಗಿ ಎಸ್.ಬಿದರೆಯಲ್ಲಿರುವ

ಶಾಲೆಗೆ ಹೋಗುತ್ತಿದ್ದಳು. ನಿಮ್ಮ ಮನೆಯಿಂದ ಆಕೆಯ ಶಾಲೆಗೆ ಹೋಗುವ ಮಾರ್ಗದುದ್ದಕ್ಕೂ ಮನೆಗಳಿವೆ ಎಂದರೆ ಸರಿ. ನಿಮ್ಮ ಮನೆಯ ಅಕ್ಕಪಕ್ಕ ಬೇರೆ ವಾಸದ ಮನೆಗಳಿವೆ ಎಂದರೆ ಸರಿ.

23. ನೀವು 1 ನೇ ಆರೋಪಿಯ ಹೆಂಡತಿ, ಮಕ್ಕಳಿಗೆ ವಿಷಯವನ್ನು ಕೇಳಿ ಅವರಿಂದ ಆತನಿಗೆ ಬುದ್ದಿ ಹೇಳಿಸಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಎಂದಿಗೂ ಪೊಲೀಸ್ ಠಾಣೆಗೆ ಹೋಗಿಲ್ಲ. ನಿಮ್ಮ ತಾಯಿ ಮತ್ತು 1 ನೇ ಆರೋಪಿ ನಡುವೆ ಸಂಬಂಧ ಇತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ತಂಗಿ ಶಾಲೆಗೆ ಹೋಗಿ ಬರುವಾಗ 1 ನೇ ಆರೋಪಿ ಆಕೆಯನ್ನು ಹೆದರಿಸುತ್ತಿದ್ದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ತಂದೆ ಮತ್ತು ಆತನ ಸ್ನೇಹಿತರಿಗೆ 1 ನೇ ಆರೋಪಿಯ ಮೇಲೆ ಇದ್ದ ದ್ವೇಷದಿಂದಾಗಿ ನಿಮ್ಮ ತಂಗಿ ಮೃತಪಟ್ಟ ಅವಕಾಶವನ್ನು ಪಡೆದು ಆತನ ವಿರುದ್ಧ ಕೊಲೆ ಕೇಸನ್ನು ಹಾಕಿಸಲು ನಿಮ್ಮಿಂದ ಸುಳ್ಳು ದೂರನ್ನು ಬರೆಸಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಾಯಿಯೊಂದಿಗೆ 1 ನೇ ಆರೋಪಿ ಯಾವುದೇ ಸಂಬಂಧವನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ ಮತ್ತು ಆತನ ಸ್ನೇಹಿತರ ಮಾತನ್ನು ಕೇಳಿ 1 ನೇ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂಗಿಯ ಸಾವಿಗೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರವಾಗಿಃ LADCS ನ Deputy Chief Defense counsel ಆದ ಶ್ರೀ ಡಿ ಬಿ ಡಿ ವಕೀಲರಿಂದಃ -**

24. ನಾನು ದ್ವಿತೀಯ ಪಿ.ಯು.ಸಿ. ಯಿಂದ ಹಾಸ್ಟೇಲಿನಲ್ಲಿದ್ದೆನು. ವಾರಕ್ಕೊಮ್ಮೆ ರಜೆಯಿದ್ದ ಸಮಯದಲ್ಲಿ ನಾನು ವಾರ್ಡನರವರ ಅನುಮತಿಯನ್ನು ಪಡೆದು ಹಾಸ್ಟೇಲಿನಿಂದ ಊರಿಗೆ ಹೋಗಿ ಬಂದು ಮಾಡುತ್ತಿದ್ದೆನು. ಶನಿವಾರದಂದು ಹಾಸ್ಟೇಲಿನಿಂದ ಹೊರಟು ಊರಿಗೆ ಹೋಗಿ ಸೋಮವಾರ ಬೆಳಿಗ್ಗೆ ಪುನಃ ಹಾಸ್ಟೇಲಿಗೆ ವಾಪಸ್ ಹೋಗುತ್ತಿದ್ದೆನು. ನೀವು ಊರಿಗೆ ಹೋದ ಸಂದರ್ಭದಲ್ಲಿ ನಿಮ್ಮ ಸಮಕ್ಷಮ 2 ನೇ ಆರೋಪಿ ನಿಮ್ಮ ತಂಗಿಗೆ ಬೈಯುವುದು, ಹೊಡೆಯುವುದನ್ನು ಮಾಡುತ್ತಿದ್ದರೆ ಎಂದರೆ ಸಾಕ್ಷಿ ನಾನು ಇದ್ದಾಗ ಮಾಡಿಲ್ಲ ಎನ್ನುತ್ತಾರೆ. ನೀವು ಊರಿಗೆ ಹೋದ ಸಂದರ್ಭದಲ್ಲಿ 1 ನೇ ಆರೋಪಿ 2 ನೇ ಆರೋಪಿಯೊಂದಿಗೆ ಮಾತನಾಡುವುದನ್ನು ಅಥವಾ ಜೊತೆಯಲ್ಲಿ ಇರುವುದನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ತಾಯಿ ಮತ್ತು ನಿಮ್ಮ ತಂದೆಯ ನಡುವೆ ನಿಮ್ಮ ತಾಯಿ 1 ನೇ ಆರೋಪಿಯೊಂದಿಗೆ ಸಂಬಂಧ ಇಟ್ಟುಕೊಂಡ ಬಗ್ಗೆ ನಿಮ್ಮ ಸಮಕ್ಷಮ ಜಗಳವಾಗಿತ್ತೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

25. ನನ್ನ ತಂಗಿ ಆಕೆಯ ಮೊಬೈಲಿನಿಂದ ನನ್ನ ವಾರ್ಡನ್ ಮೊಬೈಲಿಗೆ ಕರೆ ಮಾಡುತ್ತಿದ್ದಳು, ಆಗ ನಾನು ಆಕೆಯೊಂದಿಗೆ ಮಾತನಾಡುತ್ತಿದ್ದೆನು. ಫೋನಿನಲ್ಲಿ ನಿಮ್ಮ ತಂಗಿ ಆರೋಪಿತರ ನಡುವಿನ ಸಂಬಂಧದ ಬಗ್ಗೆ ತಿಳಿಸುತ್ತಿದ್ದಳು ಎಂದು ಹೇಳಿದ್ದಿರಿ ಆ

ವಿಚಾರವನ್ನು ನೀವು ನಿಮ್ಮ ವಾರ್ಡನ್ ಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

26. ಸಾಮಾನ್ಯವಾಗಿ ಮಕ್ಕಳು ಸರಿಯಾಗಿ ಓದದೇ ಇದ್ದಾಗ ತಂದೆತಾಯಿ ಓದುವಂತೆ ಬೈಯುವುದು ಮಾಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳಿ ಮುಂದುವರೆದು ನನ್ನ ತಂಗಿ ಚೆನ್ನಾಗಿ ಓದುತ್ತಿದ್ದಳು ಎನ್ನುತ್ತಾರೆ. ನಿಮ್ಮ ತಂಗಿ ಎಸ್.ಎಸ್.ಎಲ್.ಸಿ. ಓದುತ್ತಿದ್ದರಿಂದ ನಿಮ್ಮ ತಾಯಿ ಆಕೆಗೆ ಚೆನ್ನಾಗಿ ಓದುವಂತೆ ಹೇಳುತ್ತಿದ್ದಳು ಎಂದರೆ ಸರಿ. ಆ ರೀತಿ ನಿಮ್ಮ ತಾಯಿ ನಿಮ್ಮ ತಂಗಿಗೆ ಚೆನ್ನಾಗಿ ಓದುವಂತೆ ಹೇಳುತ್ತಿದ್ದರಿಂದ ನಿಮ್ಮ ತಂಗಿಯೇ ನಿಮ್ಮ ತಾಯಿಗೆ ಬೈಯುತ್ತಿದ್ದಳು ಎಂದರೆ ಸರಿಯಲ್ಲ.

27. ನಿಮ್ಮ ಅಜ್ಜಿ ಎಂದರೆ ನಿಮ್ಮ ತಂದೆಯ ತಾಯಿ ನಿಮ್ಮ ಮನೆಯನ್ನು ಬಿಟ್ಟು ಬೇರೆಯಾಗಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಮೊದಲಿಗೆ ನಮ್ಮ ಜೊತೆ ವಾಸವಾಗಿದ್ದರು ನಂತರ ಬೇರೆ ವಾಸವಾಗಿದ್ದಾರೆ ಎನ್ನುತ್ತಾರೆ. ಆ ರೀತಿ ನಿಮ್ಮ ಅಜ್ಜಿ ಬೇರೆಯಾಗಿ ವಾಸಿಸಲು ಕಾರಣವೇನು ಎಂದರೆ ಸಾಕ್ಷಿ ನನ್ನ ತಾಯಿ 1 ನೇ ಆರೋಪಿಯೊಂದಿಗೆ ಸಂಬಂಧ ಇಟ್ಟುಕೊಂಡಿದ್ದರಿಂದ ನನ್ನ ಅಜ್ಜಿ ಬೇರೆ ಹೋದರು ಎನ್ನುತ್ತಾರೆ. ಆ ಕಾರಣಕ್ಕೆ ನಾನು ಬೇರೆ ವಾಸಿಸುತ್ತಿದ್ದೇನೆ ಎಂದು ನಿಮ್ಮ ಅಜ್ಜಿ ನಿಮಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

28. ನಿಮ್ಮ ತಂಗಿ ಮೊಬೈಲಿನಲ್ಲಿ ಫೇಸ್ ಬುಕ್, ವಾಟ್ಸಪ್ ಮತ್ತು ಇನ್ಸ್ಟಾಗ್ರಾಂ ಬಳಸುತ್ತಿದ್ದರೇ ಎಂದರೆ ಸಾಕ್ಷಿ ವಾಟ್ಸಪ್

ಮಾತ್ರ ಬಳಸುತ್ತಿದ್ದಳು ಎನ್ನುತ್ತಾರೆ. 2 ನೇ ಆರೋಪಿ 1 ನೇ ಆರೋಪಿಯೊಂದಿಗೆ ಯಾವುದೇ ರೀತಿಯ ಸಂಬಂಧವನ್ನು ಇಟ್ಟುಕೊಂಡಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ನಿಮ್ಮ ತಂಗಿಗೆ ಏನಾದರೂ ಮಾಡಿಕೊಂಡು ಸಾಯಿ ಎಂದು ಹೇಳಿ ಪ್ರತಿದಿನ ಹಿಂಸೆ ಕೊಡುತ್ತಿದ್ದರು ಎಂದು ನೀವು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದನ್ನು ನಿಮ್ಮ ತಂಗಿ ಮನಸ್ಸಿಗೆ ಹಚ್ಚುಕೊಂಡು ಕೊರಗುತ್ತಿದ್ದಳು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ನಿಮ್ಮ ತಂಗಿಗೆ ನೀಡುತ್ತಿದ್ದ ಹಿಂಸೆಯಿಂದಲೇ ಆಕೆ ಕೊರಗಿ ಆತ್ಮಹತ್ಯೆ ಮಾಡಿಕೊಂಡಿದ್ದಳು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

29. ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಸಾಕ್ಷಿ ಮುಂದುವರೆದು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ನನ್ನ ತಂಗಿಯ ಮರಣೋತ್ತರ ಪರೀಕ್ಷೆಯನ್ನು ನಡೆಸುವ ಸಮಯದಲ್ಲಿ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎನ್ನುತ್ತಾರೆ. ನೀವು ಕೊಟ್ಟ ಹೇಳಿಕೆಯನ್ನು ಪೊಲೀಸರು ಬರವಣಿಗೆ ಮಾಡಿಕೊಂಡರೇ ಎಂದರೆ ಸಾಕ್ಷಿ ಹೌದು ಅನಿಸುತ್ತದೆ ಎನ್ನುತ್ತಾರೆ. ನಾನು ಹೇಳಿದ್ದನ್ನೇ ಅವರು ಬರೆದುಕೊಂಡಿದ್ದಾರೆ ನಂತರ ಅದನ್ನು ನಾನು ಓದಿದ್ದೇನೆ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆಯ ಮಾತು ಕೇಳಿ ನಿಮ್ಮ ತಾಯಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿದಿದ್ದಿರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಸುಳ್ಳು ಹೇಳಿಸುವ ಅವಶ್ಯಕತೆ

ಇಲ್ಲ ಎನ್ನುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ